A

# 030/23 – K

**Question Booklet Alpha Code**

**A**

Question Booklet Sl. No.

**Total Number of Questions : 100** **Time : 90 Minutes**

**Maximum Marks : 100**

## INSTRUCTIONS TO CANDIDATES

1. The Question Paper will be given in the form of a Question Booklet. There will be four versions of Question Booklets with Question Booklet Alpha Code viz. **A, B, C** & **D**.
2. The Question Booklet Alpha Code will be printed on the top left margin of the facing sheet of the Question Booklet.
3. The Question Booklet Alpha Code allotted to you will be noted in your seating position in the Examination Hall.
4. If you get a Question Booklet where the alpha code does not match to the allotted alpha code in the seating position, please draw the attention of the Invigilator IMMEDIATELY.
5. The Question Booklet Serial Number is printed on the top right margin of the facing sheet. If your Question Booklet is un-numbered, please get it replaced by new Question Booklet with same alpha code.
6. The Question Booklet will be sealed at the middle of the right margin. Candidate should not open the Question Booklet, until the indication is given to start answering.
7. Immediately after the commencement of the examination, the candidate should check that the Question Booklet supplied to him/her contains all the 100 questions in serial order. The Question Booklet does not have unprinted or torn or missing pages and if so he/she should bring it to the notice of the Invigilator and get it replaced by a complete booklet with same alpha code. This is most important.
8. A blank sheet of paper is attached to the Question Booklet. This may be used for rough work.
9. **Please read carefully all the instructions on the reverse of the Answer Sheet before marking your answers.**
10. Each question is provided with four choices **(A), (B), (C)** and **(D)** having one correct answer. Choose the correct answer and darken the bubble corresponding to the question number using Blue or Black Ball Point Pen in the OMR Answer Sheet.
11. **Each correct answer carries 1 mark and for each wrong answer 1/3 mark will be deducted. No negative mark for unattended questions.**
12. No candidate will be allowed to leave the examination hall till the end of the session and without handing over his/her Answer Sheet to the Invigilator. Candidates should ensure that the Invigilator has verified all the entries in the Register Number Coding Sheet and that the Invigilator has affixed his/her signature in the space provided.
13. Strict compliance of instructions is essential. Any malpractice or attempt to commit any kind of malpractice in the Examination will result in the disqualification of the candidate.

A

1. ಕೆಳಗಿನವುಗಳಲ್ಲಿ ಸರಿ ಹೊಂದದೆ ಇರುವಂತಹವು ಯಾವುವು ?
   i. ಅಯ್ಯಂಕಾಳಿ – ಸಾಧುಜನ ಪರಿಪಾಲನ ಸಂಘಂ
   ii. ವಕ್ಕಾಂ ಅಬ್ದುಲ್ ಖಾದರ್ ಮೌಲವಿ – ತಿರುವಿದಾಂಕೂರು ಮುಸ್ಲಿಂ ಮಹಾಜನ ಸಭಾ
   iii. ವಾಗ್ಭಟಾನಂದ – ಸಮತ್ವ ಸಮಾಜ
   A) i ಮತ್ತು iii B) iii ಮಾತ್ರ C) ii ಮತ್ತು iii D) i ಮಾತ್ರ

2. 1857 ರ ಮೊದಲ ಸ್ವಾತಂತ್ರ್ಯ ಸಂಗ್ರಾಮದ ಕುರಿತ ಯಾವ ಹೇಳಿಕೆ ತಪ್ಪಾಗಿದೆ ?
   i. ದೆಹಲಿಯ ಮುಷ್ಕರದ ನಾಯಕಿ ರಾಣಿ ಲಕ್ಷ್ಮೀಬಾಯಿ.
   ii. ಬಿಹಾರ್‌ನ ಆರಾದಲ್ಲಿ ನವಾಬ್ ವಾಜಿದ್ ಆಲಿ ಶಾ ಮುನ್ನಡೆಸಿದರು.
   iii. ಕಾನ್ಪುರದಲ್ಲಿ ನಾನಾ ಸಾಹೇಬ್ ಹೋರಾಟವನ್ನು ಮುನ್ನಡೆಸಿದರು.
   A) i ಮತ್ತು ii B) ii ಮತ್ತು iii C) i ಮಾತ್ರ D) iii ಮಾತ್ರ

3. ಕೆಳಗಿನವುಗಳಲ್ಲಿ ಯಾವುದು ಸರಿಯಾದ ಕ್ರಮದಲ್ಲಿದೆ ?
   i. ರೌಲೆಟ್ ಕಾಯಿದೆ – 1915
   ii. ದಂಡಿ ಯಾತ್ರೆ – 1930
   iii. ಭಾರತದಲ್ಲಿ ಸೈಮನ್ ಆಯೋಗ – 1928
   iv. ಗಾಂಧಿ-ಇರ್ವಿನ್ ಒಪ್ಪಂದ – 1931
   A) i ಮತ್ತು ii B) ii ಮತ್ತು iv C) ii ಮತ್ತು iii D) ii, iii ಮತ್ತು iv

4. 'ಸೋಷಿಯಲ್ ಕಾಂಟ್ರ್ಯಾಕ್ಟ್' – ಈ ಕೃತಿಯ ಲೇಖಕರು ಯಾರು ?
   A) ವಾಲ್ಟೇರ್ B) ರೂಸ್ಸೋ C) ಪ್ಲೇಟೋ D) ಮಾಂಟೆಸ್ಕ್ಯೂ

5. ಕೆಳಗಿನವುಗಳಲ್ಲಿ ಯಾವುದು ಸನ್ಯತ್‌ಸೇನ್‌ನ 'ತ್ರಿ ಪ್ರಿನ್ಸಿಪಲ್ಸ್'ಗೆ ಸಂಬಂಧಿಸಿಲ್ಲ ?
   i. ರಾಷ್ಟ್ರೀಯತಾವಾದ
   ii. ಸಮಗ್ರಾಧಿಪತ್ಯ
   iii. ಸಮಾಜವಾದ
   iv. ಪ್ರಜಾಪ್ರಭುತ್ವ
   A) i, ii ಮತ್ತು iii B) ii ಮತ್ತು iii C) iii ಮತ್ತು i D) ii ಮಾತ್ರ

6. ಕೆಳಗಿನವುಗಳಲ್ಲಿ 2022 ರ ಕತಾರ್ ವಿಶ್ವಕಪ್ ಫುಟ್‌ಬಾಲ್ ಪಂದ್ಯಕ್ಕೆ ಸಂಬಂಧಿಸಿದಂತೆ ಯಾವ ಹೇಳಿಕೆಗಳು ತಪ್ಪಾಗಿವೆ ?
   i. ಫ್ರಾನ್ಸ್‌ನ ಕೈಲಿಯನ್ ಎಂಬಪ್ಪೆ ಅತಿ ಹೆಚ್ಚು ಗೋಲ್‌ಗಳನ್ನು ಗಳಿಸಿದರು.
   ii. ಲಿಯೋನೆಲ್ ಮೆಸ್ಸಿಯವರು ಅತ್ಯುತ್ತಮ ಆಟಗಾರನಾಗಿ 'ಗೋಲ್ಡನ್ ಬಾಲ್' ಪ್ರಶಸ್ತಿಯನ್ನು ಪಡೆದರು.
   iii. 2022 ಎಂಬುದು ಅರ್ಜೆಂಟಿನಾದ ಎರಡನೇ ವಿಶ್ವಕಪ್‌ನ ಶೀರ್ಷಿಕೆಯಾಗಿದೆ.
   A) iii ಮಾತ್ರ B) ii ಮತ್ತು iii
   C) ಇವೆಲ್ಲವೂ ಸರಿಯಾಗಿವೆ D) ಇವೆಲ್ಲವೂ ತಪ್ಪಾಗಿವೆ

7. ಪಾಲಕ್ಕಾಡ್ ಇವುಗಳ ನಡುವೆ ಸಂಪರ್ಕವನ್ನು ಹೊಂದಿದೆ
   A) ತಮಿಳುನಾಡು–ಕೇರಳ
   B) ಕರ್ನಾಟಕ–ಕೇರಳ
   C) ಆಂಧ್ರಪ್ರದೇಶ–ಕೇರಳ
   D) ಇವು ಯಾವುದೂ ಅಲ್ಲ

8. ಉಪ್ಪು ನೀರಿನ ಸರೋವರವಾಗಿರುವ ಸಂಬಾರ್ ಸರೋವರವು ಇಲ್ಲಿ ನೆಲೆಗೊಂಡಿದೆ
   A) ರಾಜಸ್ಥಾನ್
   B) ಪಂಜಾಬ್
   C) ಹರಿಯಾಣ
   D) ಗುಜರಾತ್

9. ಈ ಕೆಳಗಿನವುಗಳಲ್ಲಿ ಯಾವುದು ''ಗಂಗಾನದಿ ವ್ಯವಸ್ಥೆ''ಯಲ್ಲಿ ಒಳಗೊಂಡಿರುವುದಿಲ್ಲ ?
   A) ಚಂಬಲ್
   B) ಬೈತರ್‌ನಿ
   C) ಬೆತ್ವಾ
   D) ಸೋನ್

10. ಪಂಪಾನದಿಯು ಎಲ್ಲಿ ಸೇರುತ್ತದೆ ?
   A) ಅರಬ್ಬೀ ಸಮುದ್ರ
   B) ವೆಂಬನಾಡ್ ಸರೋವರ
   C) ಬಂಗಾಳ ಕೊಲ್ಲಿ
   D) ಇವು ಯಾವುದೂ ಅಲ್ಲ

11. ಕೆಳಗಿನವುಗಳಲ್ಲಿ ಯಾವುದು ವಾತಾವರಣದ ಅತ್ಯಂತ ಮೇಲಿನ ಪದರವಾಗಿದೆ ?
   A) ಹವಾಗೋಲ (ಟ್ರೋಪೋಸ್ಪಿಯರ್)
   B) ವಾಯುಮಂಡಲ (ಸ್ಟ್ರ್ಯಾಟೋಸ್ಪಿಯರ್)
   C) ಉಷ್ಣಗೋಲ (ಥರ್ಮೋಸ್ಪಿಯರ್)
   D) ಮಧ್ಯಗೋಲ (ಮೆಸೋಸ್ಪಿಯರ್)

12. ಪರ್ವೇಜ್ ಮುಷರಫ್ ಯಾವ ದೇಶದ ಮಾಜಿ ಸೇನಾ ಮುಖ್ಯಸ್ಥ ಹಾಗೂ ಅಧ್ಯಕ್ಷರಾಗಿದ್ದರು ?
   A) ಅಫಘಾನಿಸ್ಥಾನ
   B) ಪಾಕಿಸ್ತಾನ
   C) ಇರಾನ್
   D) ಸೌದಿ ಅರೇಬಿಯಾ

13. ಕೆಳಗಿನವುಗಳಲ್ಲಿ ಯಾವುದು 1991 ರಿಂದ ಭಾರತದಲ್ಲಿ ಜಾರಿಗೊಳಿಸಲಾದ ಆರ್ಥಿಕ ಸುಧಾರಣೆಗಳಲ್ಲಿ ಒಂದಾಗಿಲ್ಲ ?
   A) ಖಾಸಗೀಕರಣ
   B) ಭೂಸುಧಾರಣೆ
   C) ಜಾಗತೀಕರಣ
   D) ಉದಾರೀಕರಣ

14. ಕೆಳಗಿನ ಕೋಷ್ಟಕದಿಂದ 2023 – 24ರ ಭಾರತದ ಕೇಂದ್ರ ಸರಕಾರದ ಮುಂಗಡಪತ್ರದಲ್ಲಿ ಘೋಷಿಸಿದಂತೆ ಪ್ರತಿ ವರ್ಗದ ಅಡಿಯಲ್ಲಿ ಸರಕಾರಿ ವೆಚ್ಚವನ್ನು ಹೊಂದಿಸಿ.

| ವರ್ಗ | ವೆಚ್ಚ (%) |
|---|---|
| 1. ರಕ್ಷಣೆ | a. 20% |
| 2. ಸಹಾಯಧನಗಳು | b. 7% |
| 3. ಪಿಂಚಣಿಗಳು | c. 8% |
| 4. ಬಡ್ಡಿ ಮರುಪಾವತಿ | d. 4% |

   A) 1 – c, 2 – b, 3 – d, 4 – a
   B) 1 – a, 2 – c, 3 – d, 4 – b
   C) 1 – d, 2 – a, 3 – c, 4 – b
   D) 1 – c, 2 – b, 3 – a, 4 – d

15. ಭಾರತೀಯ ರಿಸರ್ವ್ ಬ್ಯಾಂಕ್ (RBI) ನ ಕುರಿತು ಕೆಳಗಿನ ಹೇಳಿಕೆಗಳಲ್ಲಿ ಸರಿಯಾದುದನ್ನು ಆರಿಸಿ.
    1. 1935 ರಲ್ಲಿ ಸ್ಥಾಪನೆಯಾಯಿತು.
    2. 1 ರೂಪಾಯಿಯಿಂದ ಪ್ರಾರಂಭಿಸಿ ಎಲ್ಲಾ ನೋಟುಗಳನ್ನು ಹೊರಡಿಸಲಾಗುತ್ತದೆ.
    3. 1949 ರಲ್ಲಿ ರಾಷ್ಟ್ರೀಕೃತವಾಯಿತು.
    4. ಮುಂಬೈಯಲ್ಲಿ ಪ್ರಧಾನ ಕಚೇರಿ ಇದೆ.

    A) 1 ಮತ್ತು 2 ಸರಿಯಾಗಿವೆ
    B) 2, 3, 4 ಸರಿಯಾಗಿವೆ
    C) 1, 3, 4 ಸರಿಯಾಗಿವೆ
    D) ಎಲ್ಲವೂ ಸರಿಯಾಗಿವೆ (1, 2, 3, 4)

16. ವಿಶ್ವದಲ್ಲಿ ಖನಿಜಗಳ ಉತ್ಪಾದನೆಯ ಸ್ಥಳವನ್ನು ಆಧರಿಸಿ ಕೆಳಗೆ ನೀಡಲಾಗಿರುವ ಭಾರತದ ಪ್ರಮುಖ ಖನಿಜಗಳ ಸರಿಯಾದ ಕ್ರಮವನ್ನು ಕಂಡುಹಿಡಿಯಿರಿ.
    A) ಕಲ್ಲಿದ್ದಲು, ಕಬ್ಬಿಣದ ಅದಿರು, ಅಭ್ರಕ (ಮೈಕ), ಮ್ಯಾಂಗನೀಸ್
    B) ಮ್ಯಾಂಗನೀಸ್, ಅಭ್ರಕ (ಮೈಕ), ಕಬ್ಬಿಣದ ಅದಿರು, ಕಲ್ಲಿದ್ದಲು
    C) ಅಭ್ರಕ (ಮೈಕ), ಕಲ್ಲಿದ್ದಲು, ಕಬ್ಬಿಣದ ಅದಿರು, ಮ್ಯಾಂಗನೀಸ್
    D) ಅಭ್ರಕ (ಮೈಕ), ಮ್ಯಾಂಗನೀಸ್, ಕಬ್ಬಿಣದ ಅದಿರು, ಕಲ್ಲಿದ್ದಲು

17. ಭಾರತದಲ್ಲಿ ಪಂಚವಾರ್ಷಿಕ ಯೋಜನೆಗೆ ಸಂಬಂಧಿಸಿದ ಕೆಳಗಿನ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?
    i. 1950 ರಲ್ಲಿ ಯೋಜನಾ ಆಯೋಗವನ್ನು ಸ್ಥಾಪಿಸಲಾಯಿತು.
    ii. ಮೊದಲ ಪಂಚವಾರ್ಷಿಕ ಯೋಜನೆಯು ಕೃಷಿ ವಲಯಕ್ಕೆ ಆದ್ಯತೆಯನ್ನು ನೀಡಿತು.
    iii. ಈಗ (2022 – 23) 14ನೆಯ ಪಂಚವಾರ್ಷಿಕ ಯೋಜನೆಯು ಚಾಲ್ತಿಯಲ್ಲಿದೆ.
    iv. 'ಸಮಾನತೆ' ಎಂಬುದು ಪಂಚವಾರ್ಷಿಕ ಯೋಜನೆಯ ಪ್ರಮುಖ ಉದ್ದೇಶವಾಗಿದೆ.

    A) i ಮತ್ತು ii ಸರಿಯಾಗಿವೆ
    B) ii, iii ಮತ್ತು iv ಸರಿಯಾಗಿವೆ
    C) i, ii ಮತ್ತು iv ಸರಿಯಾಗಿವೆ
    D) i, ii, iii, iv ಸರಿಯಾಗಿವೆ

18. ಭಾರತೀಯ ಹಸಿರುಕ್ರಾಂತಿಗೆ ಯಾವುದು ಸಂಬಂಧಿಸಿಲ್ಲ ?
    A) ಎಂ. ಎಸ್. ಸ್ವಾಮಿನಾಥನ್
    B) ಅಧಿಕ ಇಳುವರಿ ನೀಡುವ ವಿವಿಧ ಬೆಳೆಗಳು
    C) ಸಿ. ಸುಬ್ರಹ್ಮಣಿಯನ್
    D) ಡಾ. ವರ್ಗೀಸ್ ಕುರಿಯನ್

19. ಸಂವಿಧಾನ ಸಭೆಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?
    i. ಸಂವಿಧಾನ ಸಭೆಯ ಸದಸ್ಯರನ್ನು ಮತದಾನದ ವಯಸ್ಸಿನ ಆಧಾರದ ಮೇಲೆ ಆಯ್ಕೆ ಮಾಡಲಾಗುವುದಿಲ್ಲ.
    ii. ಸಂವಿಧಾನ ಸಭೆಯು ಎಲ್ಲಾ ಧರ್ಮಗಳ ಪ್ರತಿನಿಧಿಗಳನ್ನು ಹೊಂದಿವೆ.
    iii. ರಾಜಕೀಯ ಪಕ್ಷಗಳಲ್ಲಿ ಕಾಂಗ್ರೆಸ್ ಸಂವಿಧಾನ ಸಭೆಯಲ್ಲಿ ಪ್ರಾಬಲ್ಯವನ್ನು ಹೊಂದಿತ್ತು .

    A) i ಮತ್ತು ii ಮಾತ್ರ
    B) ii ಮತ್ತು iii ಮಾತ್ರ
    C) i ಮತ್ತು iii ಮಾತ್ರ
    D) ಮೇಲಿನ ಎಲ್ಲವೂ (i, ii ಮತ್ತು iii)

20. ಕೆಳಗಿನ ಕಲ್ಪನೆಗಳಲ್ಲಿ ಯಾವುದು ಭಾರತೀಯ ಸಂವಿಧಾನವು ಬ್ರಿಟಿಷ್ ಸಂವಿಧಾನದಿಂದ ಎರವಲು ಪಡೆಯಲ್ಪಟ್ಟಿತ್ತು ?
    i. ಸಂಸದೀಯ ವ್ಯವಸ್ಥೆ
    ii. ಕಾನೂನಿನ ನಿಯಮ
    iii. ಮೂಲಭೂತ ಹಕ್ಕುಗಳು
    A) i ಮತ್ತು iii ಮಾತ್ರ
    B) ii ಮತ್ತು iii ಮಾತ್ರ
    C) i ಮತ್ತು ii ಮಾತ್ರ
    D) ಮೇಲಿನ ಎಲ್ಲವೂ (i, ii ಮತ್ತು iii)

21. ಕೆಳಗಿನ ಹೇಳಿಕೆಗಳಲ್ಲಿ ಯಾವುವು ಸರಿಯಾಗಿದೆ ?
    i. ನಿಷೇಧಾಜ್ಞೆಗಳು ಕೆಳ ನ್ಯಾಯಾಲಯಗಳಲ್ಲಿ ವಿಧಿಸಲಾದ ವಿಶೇಷ ಆದೇಶಗಳಾಗಿವೆ.
    ii. ಹೇಬಿಯಸ್ ಕಾರ್ಪಸ್ ಎಂಬುದು ಬಂಧಿತ ವ್ಯಕ್ತಿಯನ್ನು ಹಾಜರುಪಡಿಸಲು ಹೊರಡಿಸಲಾದ ವಿಶೇಷ ಆದೇಶವಾಗಿದೆ.
    iii. ಮ್ಯಾಂಡಮಸ್ ಎಂಬುದು ಅಧಿಕಾರಿಯೋರ್ವನ ಮೇಲೆ ವಿಧಿಸಲಾಗುವ ವಿಶೇಷ ಆದೇಶವಾಗಿದೆ.
    A) ಮೇಲಿನ ಎಲ್ಲವೂ (i, ii ಮತ್ತು iii)
    B) ii ಮತ್ತು iii ಮಾತ್ರ
    C) i ಮತ್ತು ii ಮಾತ್ರ
    D) i ಮತ್ತು iii ಮಾತ್ರ

22. ಕೆಳಗಿನವುಗಳಲ್ಲಿ ಯಾವುದು ಭಾರತದ ಸಂವಿಧಾನದ 19ನೇ ವಿಧಿಯ ಅಡಿಯಲ್ಲಿನ ಸ್ವಾತಂತ್ರ್ಯಗಳಲ್ಲಿ ಒಳಗೊಂಡಿರುವುದಿಲ್ಲ ?
    i. ಅಭಿವ್ಯಕ್ತಿ ಸ್ವಾತಂತ್ರ್ಯ
    ii. ಸಂಘದ ಸ್ವಾತಂತ್ರ್ಯ
    iii. ಶಿಕ್ಷಣದ ಸ್ವಾತಂತ್ರ್ಯ
    A) i ಮತ್ತು ii ಮಾತ್ರ
    B) ii ಮತ್ತು iii ಮಾತ್ರ
    C) iii ಮಾತ್ರ
    D) ಮೇಲಿನ ಎಲ್ಲವೂ (i, ii ಮತ್ತು iii)

23. ಕೆಳಗಿನವುಗಳಲ್ಲಿ ಯಾವುದು ನಿರ್ದೇಶಕ ತತ್ವಗಳ ಉದ್ದೇಶಗಳ ಬಗ್ಗೆ ಸರಿಯಾದ ಹೇಳಿಕೆಯಾಗಿದೆ ?
    i. ಅಂತಾರಾಷ್ಟ್ರೀಯ ಶಾಂತಿಯನ್ನು ಪೋಷಿಸುತ್ತದೆ.
    ii. ಗುಡಿಕೈಗಾರಿಕೆಗಳನ್ನು ಪೋಷಿಸುತ್ತದೆ.
    iii. ಜೀವನ ಮಟ್ಟವನ್ನು ಹೆಚ್ಚಿಸುತ್ತದೆ.
    A) ಮೇಲಿನ ಎಲ್ಲವೂ (i, ii ಮತ್ತು iii)
    B) i ಮತ್ತು iii ಮಾತ್ರ
    C) ii ಮತ್ತು iii ಮಾತ್ರ
    D) i ಮತ್ತು ii ಮಾತ್ರ

24. ಆಸ್ತಿಯ ಹಕ್ಕುಗಳ ಬಗೆಗಿನ ಕೆಳಗಿನ ಯಾವ ಹೇಳಿಕೆ ಸರಿಯಾಗಿದೆ ?
    i. ಆಸ್ತಿಯ ಹಕ್ಕು ಎಂಬುದು ಒಂದು ಮೂಲಭೂತ ಹಕ್ಕು.
    ii. ಆಸ್ತಿಯ ಹಕ್ಕುಗಳು ಕಾನೂನು ಹಕ್ಕಾಗಿವೆ.
    iii. ಆಸ್ತಿಯ ಹಕ್ಕುಗಳು ಮೂಲಭೂತ ಹಾಗೂ ಕಾನೂನು ಹಕ್ಕುಗಳಾಗಿವೆ.
    A) ii ಮಾತ್ರ
    B) i ಮಾತ್ರ
    C) iii ಮಾತ್ರ
    D) ಮೇಲಿನ ಎಲ್ಲವೂ (i, ii ಮತ್ತು iii)

25. ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ ?
   i. ಭಾರತದ ಸಂವಿಧಾನದ 368ನೆಯ ಅನುಚ್ಛೇದವು ತಿದ್ದುಪಡಿಗೆ ಸಂಬಂಧಿಸಿದೆ.
   ii. 12 ರಿಂದ 35ರವರೆಗಿನ ಅನುಚ್ಛೇದಗಳು ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದೆ.
   iii. ಉಚ್ಚ ನ್ಯಾಯಾಲಯಗಳು ಅನುಚ್ಛೇದ 32 ಅಡಿಯಲ್ಲಿ ರಿಟ್‌ಗಳನ್ನು ನೀಡಬಹುದು.
   A) ii ಮತ್ತು iii ಮಾತ್ರ
   B) i ಮತ್ತು ii ಮಾತ್ರ
   C) i ಮಾತ್ರ
   D) ಮೇಲಿನ ಎಲ್ಲವೂ (i, ii ಮತ್ತು iii)

26. ಕೆಳಗಿನವುಗಳು ಭಾರತದ ಸಂವಿಧಾನದ ಮೂರು ಪಟ್ಟಿಗಳಲ್ಲಿ ಒಳಗೊಂಡಿರುವ ವಿಷಯಗಳಿಗೆ ಸಂಬಂಧಿಸಿದ ಹೇಳಿಕೆಯಾಗಿದೆ. ಅದರಲ್ಲಿ ಸರಿಯಾದ ಹೇಳಿಕೆ ಯಾವುದು ?
   i. ಕೇಂದ್ರ ಪಟ್ಟಿ – ಬ್ಯಾಂಕಿಂಗ್, ಸಾರ್ವಜನಿಕ ಆರೋಗ್ಯ , ಪೊಲೀಸ್
   ii. ರಾಜ್ಯ ಪಟ್ಟಿ – ಜೈಲು, ಮದ್ಯ, ವಾಣಿಜ್ಯ
   iii. ಏಕಕಾಲಿಕ ಪಟ್ಟಿ – ಅರಣ್ಯ, ಶಿಕ್ಷಣ, ಕಾರ್ಮಿಕ ಸಂಘಟನೆಗಳು
   A) i ಮತ್ತು ii ಮಾತ್ರ
   B) ii ಮತ್ತು iii ಮಾತ್ರ
   C) i ಮತ್ತು iii ಮಾತ್ರ
   D) ಮೇಲಿನ ಎಲ್ಲವೂ (i, ii ಮತ್ತು iii)

27. ಕೆಳಗಿನ ಯಾವ ಹೇಳಿಕೆಗಳು ತಪ್ಪಾಗಿದೆ ?
   i. ಕೇಂದ್ರ ಲೋಕಸೇವಾ ಆಯೋಗ (ಯು.ಪಿ.ಎಸ್.ಸಿ.) ಎಂಬುದು ಒಂದು ಸಾಂವಿಧಾನಿಕ ಸಂಸ್ಥೆ.
   ii. ರಾಜ್ಯ ಲೋಕಸೇವಾ ಆಯೋಗ (ಪಿ.ಎಸ್.ಸಿ.) ಎಂಬುದು ಒಂದು ಸಾಂವಿಧಾನಿಕ ಸಂಸ್ಥೆಯಲ್ಲ.
   iii. ರಾಜ್ಯ ಲೋಕಸೇವಾ ಆಯೋಗ (ಪಿ.ಎಸ್.ಸಿ.)ದ ಅಧ್ಯಕ್ಷರನ್ನು ರಾಷ್ಟ್ರಪತಿಗಳು ನೇಮಕ ಮಾಡುತ್ತಾರೆ.
   A) ii ಮತ್ತು iii ಮಾತ್ರ
   B) i ಮತ್ತು iii ಮಾತ್ರ
   C) i ಮತ್ತು ii ಮಾತ್ರ
   D) ಮೇಲಿನ ಎಲ್ಲವೂ (i, ii ಮತ್ತು iii)

28. ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ ?
   i. ಹಿಮಾಚಲ ಪ್ರದೇಶ ಹಾಗೂ ಮಧ್ಯಪ್ರದೇಶಗಳು ಉಭಯ ಸದನಗಳ ಶಾಸಕಾಂಗಗಳನ್ನು ಹೊಂದಿವೆ.
   ii. ಉತ್ತರ ಪ್ರದೇಶ ಹಾಗೂ ಆಂಧ್ರಪ್ರದೇಶಗಳು ಉಭಯ ಸದನಗಳ ಶಾಸಕಾಂಗಗಳನ್ನು ಹೊಂದಿವೆ.
   iii. ಕರ್ನಾಟಕ ಮತ್ತು ಬಿಹಾರ್‌ಗಳು ಉಭಯ ಸದನಗಳ ಶಾಸಕಾಂಗಗಳನ್ನು ಹೊಂದಿವೆ.
   A) i ಮತ್ತು ii ಮಾತ್ರ
   B) i ಮಾತ್ರ
   C) ii ಮತ್ತು iii ಮಾತ್ರ
   D) ಮೇಲಿನ ಎಲ್ಲವೂ (i, ii ಮತ್ತು iii)

29. ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ ?
   i. ನೀರು ಜಾರು (ಲೋವೆ) ಭೂಮಿಯ ಅಡಿಯಲ್ಲಿ ನೀರಿನ ಸಮೃದ್ಧ ಭಾಗದ ಮೇಲಿನ ಮೇಲ್ಮೈಯಾಗಿದೆ.
   ii. ಜೌಗು ಪ್ರದೇಶಗಳು ಮೇಲ್ಮೈ ನೀರನ್ನು ಸಂಗ್ರಹಿಸುವ ನೈಸರ್ಗಿಕ ಸ್ಥಳಗಳಾಗಿದೆ.
   iii. ಬಾವಿಯಲ್ಲಿನ ನೀರಿನ ಮಟ್ಟವು ಲೋವೆ ಮೇಲ್ಭಾಗವಾಗಿದೆ.
   A) i ಮತ್ತು iii ಮಾತ್ರ
   B) ii ಮತ್ತು iii ಮಾತ್ರ
   C) i ಮತ್ತು ii ಮಾತ್ರ
   D) ಮೇಲಿನ ಎಲ್ಲವೂ (i, ii ಮತ್ತು iii)

30. ಕೇರಳ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ಸಂಬಂಧಿಸಿದಂತೆ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ ?
   i. ಜಸ್ಟೀಸ್ ಎಂ.ಎಂ. ಪರೀದ್ ಪಿಳ್ಳೈಯವರು ಕೇರಳ ರಾಜ್ಯ ಮಾನವ ಹಕ್ಕುಗಳ ಆಯೋಗದ ಪ್ರಥಮ ಅಧ್ಯಕ್ಷರಾಗಿದ್ದರು.
   ii. ಜಸ್ಟೀಸ್ ಆ್ಯಂಟನಿ ಡೊಮಿನಿಕ್ ಅವರು ಕೇರಳ ರಾಜ್ಯ ಮಾನವ ಹಕ್ಕುಗಳ ಆಯೋಗದ ಹಾಲಿ ಅಧ್ಯಕ್ಷರಾಗಿದ್ದಾರೆ.
   iii. ಡಾ. ಎಸ್. ಬಲರಾಮನ್, ಶ್ರೀ. ಟಿ. ಕೆ. ವಿಲ್ಸನ್ ಪ್ರಥಮ ಮಾನವ ಹಕ್ಕುಗಳ ಆಯೋಗದ ಸದಸ್ಯರಾಗಿದ್ದರು.
   A) i ಮತ್ತು ii ಮಾತ್ರ
   B) ii ಮತ್ತು iii ಮಾತ್ರ
   C) i ಮತ್ತು iii ಮಾತ್ರ
   D) ಮೇಲಿನ ಎಲ್ಲವೂ (i, ii ಮತ್ತು iii)

31. ಕೆಳಗಿನವುಗಳಲ್ಲಿ ಯಾವ ಹೇಳಿಕೆ ಸರಿಯಾಗಿದೆ ?
   i. ಪೋಕ್ಸೋ ಕಾಯಿದೆಯ ಪ್ರಕಾರ, ಹುಡುಗ ಎಂದರೆ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗು.
   ii. ಪೋಕ್ಸೋ ಅಪರಾಧವನ್ನು ತಕ್ಷಣವೇ ವರದಿ ಮಾಡದಿದ್ದರೆ, ಆರು ತಿಂಗಳವರೆಗೆ ಜೈಲು ಶಿಕ್ಷೆ ವಿಧಿಸಬಹುದು.
   iii. ಕೆಲ್ಸಾ ಬದುಕುಳಿದವರಿಗೆ (ಸಂತ್ರಸ್ತರಿಗೆ) ಉಚಿತ ಕಾನೂನು ನೆರವನ್ನು ನೀಡುತ್ತದೆ.
   A) i ಮತ್ತು ii ಮಾತ್ರ
   B) i ಮತ್ತು iii ಮಾತ್ರ
   C) ii ಮತ್ತು iii ಮಾತ್ರ
   D) ಮೇಲಿನ ಎಲ್ಲವೂ (i, ii ಮತ್ತು iii)

32. O ರಕ್ತ ಗುಂಪಿನ ಕುರಿತಂತೆ ಕೆಳಗಿನವುಗಳಲ್ಲಿ ಯಾವುದು ಸರಿಯಾಗಿದೆ ?
   A) ಪ್ರತಿಜನಕಗಳಾದ 'A' ಮತ್ತು 'B' ಕಂಡುಬರುತ್ತವೆ
   B) ಪ್ರತಿಜನಕ 'A' ಮಾತ್ರ ಕಂಡುಬರುತ್ತದೆ
   C) ಪ್ರತಿಕಾಯಗಳಾದ 'a' ಮತ್ತು 'b'ಗಳು ಕಂಡುಬರುತ್ತವೆ
   D) ಪ್ರತಿಕಾಯ 'a' ಮಾತ್ರ ಕಂಡುಬರುತ್ತದೆ

33. ಜೀವಗೋಳದ ರಕ್ಷಕರೆಂದು ಯಾರನ್ನು ಕರೆಯುತ್ತಾರೆ ?
   A) ಸೂಕ್ಷ್ಮಜೀವಿಗಳು
   B) ಗಿಡಗಳು
   C) ಪ್ರಾಣಿಗಳು
   D) ಪರ್ವತಗಳು

34. ಹೆಪಟೈಟಿಸ್ ಬಗೆಗಿನ ಯಾವ ಹೇಳಿಕೆಯು ತಪ್ಪಾಗಿದೆ ?
   A) ಇದೊಂದು ಯಕೃತ್ತಿನ ರೋಗ
   B) ಇದು ಫೈಲೇರಿಯ ಹುಳಗಳಿಂದ ಉಂಟಾಗುತ್ತದೆ
   C) ಒಳಚರಂಡಿ ಮೂಲಕ ಹರಡುತ್ತದೆ
   D) ರಕ್ತದಲ್ಲಿನ ಬಿಲಿರುಬಿನ್ ಮಟ್ಟವು ಹೆಚ್ಚಾಗುತ್ತದೆ

35. ________ ಡಿಎನ್ಎಯಲ್ಲಿನ ಜೀನ್‌ನ ಸ್ಥಳವನ್ನು ಕಂಡುಹಿಡಿಯಲು ಸಹಾಯ ಮಾಡುವ ಸಾಂಕೇತಿಕ ವಿಧಿಯಾಗಿದೆ.
   A) ಜೀನ್ ಎಡಿಟಿಂಗ್
   B) ಜೀನ್ ಥೆರಪಿ
   C) ಡಿಎನ್ಎ ಫಿಂಗರ್‌ಪ್ರಿಂಟಿಂಗ್
   D) ಜೀನ್ ಮ್ಯಾಪಿಂಗ್

36. ಕೆಳಗಿನವುಗಳಲ್ಲಿ ಯಾವುದು ಜೀವನಶೈಲಿ ರೋಗವಲ್ಲ ?
   A) ಗಲಗ್ರಂಥಿಯ ಉರಿಯೂತ  B) ಕೊಬ್ಬುಳ್ಳ ಯಕೃತ್ತು
   C) ಹೃದಯಾಘಾತ  D) ಅಧಿಕ ರಕ್ತದೊತ್ತಡ

37. ಯಾವ ಕಿಣ್ವವನ್ನು 'ಆನುವಂಶಿಕ ಅಂಟು' ಎಂದು ಕರೆಯಲಾಗುತ್ತದೆ ?
   A) ರಿಸ್ಟ್ರಿಕ್ಷನ್ ಎಂಡೋನ್ಯೂಕ್ಲಿಯೇಸ್  B) ಲೈಸ್
   C) ಲಿಗೇಸ್  D) ಹೈಡ್ರೋಲೇಸ್

38. ಅತಿನೇರಳೆ ಕಿರಣಗಳಿಗೆ ಸಂಬಂಧಿಸಿದಂತೆ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ ?
   i. ತರಂಗಾಂತರವು 400 nm ರಿಂದ 700 nm ವರೆಗೆ ಇರುತ್ತದೆ.
   ii. ಇದು ಮಾನವ ದೇಹದಲ್ಲಿ ಮೆಲನಿನ್‌ನ ಉತ್ಪಾದನೆಗೆ ಕಾರಣವಾಗುತ್ತದೆ.
   iii. ಕ್ಯಾನ್ಸರ್ ಕೋಶಗಳನ್ನು ನಾಶಮಾಡಲು ಬಳಸಲಾಗುತ್ತದೆ.
   iv. ನೀರನ್ನು ಶುದ್ಧೀಕರಿಸಲು ಬಳಸಲಾಗುತ್ತದೆ.
   A) i, ii  B) i, iii  C) ii, iv  D) iii, iv

39. ಫೋಕಲ್ ಲೆಂತ್ 20 cm ನ ಪೀನ ಮಸೂರದ ವಕ್ರತೆಯ ತ್ರಿಜ್ಯ ಎಷ್ಟು ?
   A) 40 cm  B) 5 cm  C) 10 cm  D) 20 cm

40. 10 kg ದ್ರವ್ಯರಾಶಿಯ ವಸ್ತುವು 5 m/s ವೇಗದಲ್ಲಿ ಚಲಿಸಿದರೆ, ವಸ್ತುವಿನ ಆವೇಗ ಎಷ್ಟು ?
   A) 2 kg m/s  B) 0.5 kg m/s  C) 5 kg m/s  D) 50 kg m/s

41. ಶ್ರೀಹರಿಕೋಟಾ SSLVD2 ನಿಂದ ಉಡಾಯಿಸಲಾದ ಮತ್ತು ಕಕ್ಷೆಗೆ ಸೇರಿಸಲಾದ ಉಪಗ್ರಹಗಳಲ್ಲಿ ಮಲಯಾಳಿಗಳು ಸೇರಿದಂತೆ ವಿದ್ಯಾರ್ಥಿನಿಯರು ತಯಾರಿಸಿದ ಉಪಗ್ರಹ
   A) EOS – 07  B) ಆಜಾದಿಸ್ಯಾಟ್ – 2
   C) JANUS – 1  D) ಕಾರ್ಟೋಸ್ಯಾಟ್ – 3

42. W ಎಂಬುದು ಯಾವ ಮೂಲಧಾತುವಿನ ಸಂಕೇತವಾಗಿದೆ ?
   A) ವನಾಡಿಯಂ  B) ಟಂಗ್‌ಸ್ಟನ್  C) ಮರ್ಕ್ಯೂರಿ  D) ಟಿನ್

43. ಕೆಳಗಿನವುಗಳಲ್ಲಿ ಹುಸಿ ಪರಿವರ್ತನೆಯ ಮೂಲಧಾತು ಯಾವುದು ?
   A) ಕ್ಯಾಡ್ಮಿಯಂ  B) ಮ್ಯಾಂಗನೀಸ್  C) ಕೋಬಾಲ್ಟ್  D) ಕ್ರೋಮಿಯಂ

44. ಪರಮಾಣು ರಿಯಾಕ್ಟರ್‌ಗಳಲ್ಲಿ ಯಾವ ಇಂಧನವನ್ನು ಬಳಸಲಾಗುತ್ತದೆ ?
   A) ಜರ್ಮೇನಿಯಂ  B) ಜಿರ್ಕೋನಿಯಂ
   C) ಟೈಟಾನಿಯಂ  D) ಪ್ಲುಟೋನಿಯಂ

45. ಪರಮಾಣು ಸಂಖ್ಯೆ 11 ರೊಂದಿಗಿನ ಒಂದು ಮೂಲಧಾತುವು ಅದರ L ಶೆಲ್‌ನಲ್ಲಿ _______ ಎಲೆಕ್ಟ್ರಾನ್‌ಗಳನ್ನು ಹೊಂದಿದೆ.
   A) 2  B) 1  C) 8  D) 7

46. ವೆಲ್ಲಾಯಿಯಪ್ಪನ್ ಮುಖ್ಯ ಪಾತ್ರದಲ್ಲಿರುವ ಒ. ವಿ. ವಿಜಯನ್ ಬರೆದಿರುವ ಸಣ್ಣ ಕಥೆ ಯಾವುದು ?
   A) ಅಶಾಂತಿ
   B) ಕಡಲ್ತಿರತ್
   C) ಕಾಟ್ಟು ಪರಂಜಾ ಕಥಾ
   D) ಬಾಲ ಬೋಧಿನಿ

47. 'ಶಬ್ದ ಸುಂದರನ್' ಎಂದು ಪ್ರಸಿದ್ಧರಾದ ಕವಿ ಯಾರು ?
   A) ಚಂಗಂಪ್ಪುಳ್ಳ ಕೃಷ್ಣ ಪಿಳ್ಳೈ
   B) ವಯಲಾರ್ ರಾಮವರ್ಮ
   C) ವಲ್ಲತ್ತೋಳ್
   D) ಪಿ. ಭಾಸ್ಕರನ್

48. ಒಲಿಂಪಿಕ್ಸ್‌ನಲ್ಲಿ ಮೊದಲ ಬಾರಿಗೆ ಜಯಗಳಿಸಿದ ಭಾರತೀಯ ಮಹಿಳೆ ಯಾರು ?
   A) ಪಿ. ಟಿ. ಉಷಾ
   B) ಮೇರಿ ಕೋಮ್
   C) ಪಿ. ವಿ. ಸಿಂಧು
   D) ಕರ್ಣಂ ಮಲ್ಲೇಶ್ವರಿ

49. ಆಲೂಗಡ್ಡೆ ತಿನ್ನುವವರ (ಪೊಟೇಟೋ ಈಟರ್ಸ್) ಚಿತ್ರವನ್ನು ಬಿಡಿಸಿದವರು ಯಾರು ?
   A) ಲಿಯೋನಾರ್ಡೋ ಡ ವಿಂಚಿ
   B) ರಫೇಲ್ ಸ್ಯಾಂಜಿಯೋ
   C) ಪೌಲ್ ಸೆಜಾನ್ನೆ
   D) ವಿನ್ಸೆಂಟ್ ವಾನ್ ಗೋಘ್

50. ಭಾರತದಲ್ಲಿ ಕಾಗದರಹಿತ ಮೊದಲ ಉಚ್ಚ ನ್ಯಾಯಾಲಯ ಯಾವುದು ?
   A) ದೆಹಲಿ ಉಚ್ಚ ನ್ಯಾಯಾಲಯ
   B) ಗುಜರಾತ್ ಉಚ್ಚ ನ್ಯಾಯಾಲಯ
   C) ಕೇರಳ ಉಚ್ಚ ನ್ಯಾಯಾಲಯ
   D) ತಮಿಳುನಾಡು ಉಚ್ಚ ನ್ಯಾಯಾಲಯ

51. $1 + 2 + 3 + ... + 50 =$ _____
   A) 100
   B) 1275
   C) 2500
   D) 1000

52. $9 – [8 – (8 – 6 \times 2) \div 4]$
   A) 0
   B) 6
   C) – 6
   D) 1

53. 0.1 ರ ಯಾವ ಶೇಕಡಾವಾರು 0.01 ಆಗಿದೆ ?
   A) 100
   B) $\frac{1}{10}$
   C) 0.1
   D) 10

54. $\frac{(x)^{0.7}}{48} = \frac{36}{(x)^{2.3}}$, x ನ ಮೌಲ್ಯ ಎಷ್ಟು ?
   A) 23
   B) 10
   C) 12
   D) 70

55. ಒಂದು ವಸ್ತುವಿನ ಬೆಲೆ ರೂ. 80. ಅದರ ಬೆಲೆ 25% ಹೆಚ್ಚಾಗಿದೆ. ಅನಂತರ ಬೆಲೆ 25%ರಷ್ಟು ಕುಸಿದಿದೆ. ಹಾಗಾದರೆ ಅದರ ಪ್ರಸಕ್ತ ಬೆಲೆ ಎಷ್ಟು ?

A) 75 B) 80

C) 85 D) 100

56. ಒಂದು ವೇಳೆ 'JUNE' ಎಂಬುದನ್ನು 'VKFO' ಎಂದೂ ಮತ್ತು 'ANIMAL' ಎಂಬುದನ್ನು 'JOBMBN' ಎಂದು ಸಂಕೇತಿಸಿದರೆ 'TIME' ಎಂಬುದನ್ನು ಹೇಗೆ ಸಂಕೇತಿಸಬಹುದು ?

A) JUFN B) UJNF

C) FNJU D) RGKC

57. 2008ರ ಜನವರಿ 1 ಮಂಗಳವಾರವಾಗಿದ್ದರೆ, 2009ರ ಜನವರಿ 1 ಯಾವ ವಾರವಾಗಿದೆ ?

A) ಸೋಮವಾರ

B) ಮಂಗಳವಾರ

C) ಗುರುವಾರ

D) ಬುಧವಾರ

58. 3 : 108 : : ? : 500, ಆದರೆ ಯಾವ ಸಂಖ್ಯೆಯು ಪ್ರಶ್ನಾರ್ಥಕ ಚಿಹ್ನೆಗೆ ಹೊಂದಿಕೆಯಾಗುತ್ತದೆ ? ಅಂದರೆ ': :' ಚಿಹ್ನೆಯ ಎಡಭಾಗದಲ್ಲಿರುವ ಎರಡು ಸಂಖ್ಯೆಗಳು ಅದೇ ಸಂಬಂಧವನ್ನು ಸೂಚಿಸುತ್ತವೆ.

A) 6 B) 5

C) 4 D) 7

59. A × B ಎಂದರೆ Aಯು B ಯ ಮಗಳು

A + B ಎಂದರೆ Aಯು B ಯ ಗಂಡ

A – B ಎಂದರೆ Aಯು B ಯ ಸಹೋದರಿ

ಆದರೆ P + Q – R × S ಗೆ ಸಂಬಂಧಿಸಿದಂತೆ ಯಾವುದು ಸರಿ ?

A) P ಯು S ನ ಮಗ

B) Q ಎಂಬವನು R ನ ಸಹೋದರ

C) S ಎಂಬವಳು R ನ ಮಗಳು

D) P ಎಂಬವನು S ನ ಅಳಿಯ

60. ಯಾವ ಗುಂಪು ಬೇರೆಯವುಗಳಿಗಿಂತ ಭಿನ್ನವಾಗಿದೆ ?

A) ELG B) PTC

C) HRJ D) GQJ

61. Use the correct question tag for the following sentence.
    Suma broke the glass, ________
    A) did she ?    B) didn't she ?
    C) does she ?    D) doesn't she ?

62. Drugs and liquor _______ injurious to health.
    A) is    B) has    C) are    D) was

63. Pick out the correct spelling from the following options.
    A) Lazyness    B) Lazynes    C) Lazyiness    D) Laziness

64. Pick out the most suitable word from the options given below.
    Lily gave up the struggle in __________
    A) grievous    B) delay    C) despair    D) exclaim

65. Misty plays a _________ role in the film.
    A) dual    B) duel    C) done    D) do

66. Antonym of dusk
    A) Daily    B) Bench    C) Dawn    D) Day

67. Opposite gender of drake
    A) Doe    B) Duck    C) Donkey    D) Dove

68. Ronald is coming _________ an aeroplane.
    A) if    B) on    C) by    D) with

69. Correct the following sentence using the appropriate option.
    Ramesh saw a eagle in the zoo.
    A) an    B) of    C) a    D) on

70. Change the following sentence into passive voice.
    Kamala loves Mini.
    A) Mini loved Kamala.    B) Mini is loved by Kamala.
    C) Mini loves Kamala.    D) Mini is loving Kamala.

71. ಕೆಳಗಿನವುಗಳಲ್ಲಿ ಸರಿಯಾದ ಪದವನ್ನು ಆರಿಸಿರಿ.

A) ಸ್ವಾತಂತ್ರ
B) ಸ್ವಾತಂತ್ರ್ಯ
C) ಸ್ವಾತಂತ್ಯ
D) ಸ್ವಾತ್ಯಂತ್ರ್ಯ

72. ಸರಿಯಾದ ವಾಕ್ಯವನ್ನು ಗುರುತಿಸಿರಿ.

A) ವೆಂಕಟೇಶನು ನೀರನ್ನು ಕುಡಿದನು
B) ವೆಂಕಟೇಶನು ನೀರುಗಳನ್ನು ಕುಡಿದನು
C) ವೆಂಕಟೇಶನು ನೀರನ್ನು ತಿಂದನು
D) ವೆಂಕಟೇಶನು ನೀರ ಕಡಿದನು

73. ಅಕ್ಷಿ – ಈ ಪದದ ಸಮಾನಾರ್ಥ ಪದ ಯಾವುದು ?

A) ಪಕ್ಷಿ
B) ಸಾಕ್ಷಿ
C) ಕಣ್ಣು
D) ಅಕ್ಕಿ

74. 'ಮಗು' – ಇದು ಯಾವ ಲಿಂಗ ಪದ ?

A) ಪುಲ್ಲಿಂಗ
B) ಸ್ತ್ರೀಲಿಂಗ
C) ಪುಂಸ್ತ್ರೀಲಿಂಗ
D) ನಪುಂಸಕಲಿಂಗ

75. ಸಾವಿರದ ಒಂಬೈನೂರ ನಲ್ವತ್ತೇಳು – ಕೆಳಗಿನವುಗಳಲ್ಲಿ ಸರಿಯಾದುದನ್ನು ಆರಿಸಿರಿ.

A) 100090047
B) 190047
C) 1947
D) 1000947

76. ಇವುಗಳಲ್ಲಿ ಬಹುವಚನ ಪ್ರತ್ಯಯ ಯಾವುದು ?

A) ನು
B) ರು
C) ಳು
D) ಉ

77. 'Text Book' – ಇದರ ಕನ್ನಡ ರೂಪವೇನು ?

A) ಪುಸ್ತಕ
B) ಬರವಣಿಗೆ ಪುಸ್ತಕ
C) ಓದುವ ಪುಸ್ತಕ
D) ಪಠ್ಯಪುಸ್ತಕ

78. ಸರಿಯಾಗಿ ಜೋಡಿಸಿ ಬರೆಯಿರಿ.

1 2 3 4 5

ಭಾರತ/ದೇಶ/ನನ್ನ/ಭಾರತೀಯರೆಲ್ಲರೂ/ಸಹೋದರ ಸಹೋದರಿಯರು

A) 5 1 2 4 3
B) 1 2 3 4 5
C) 3 2 1 4 5
D) 4 3 2 1 5

79. ಸುಲಭ – ಇದರ ವಿರೋಧಾರ್ಥ ಪದ ಯಾವುದು ?

A) ದುರ್ಲಭ
B) ಲಭ್ಯ
C) ಲಾಭ
D) ಸೌಲಭ್ಯ

80. ಬಿಟ್ಟಲ್ಲಿ ಭರ್ತಿ ಮಾಡಿರಿ : ಮನಸ್ಸಿದ್ದರೆ ___________.

A) ಮಾರ್ಗ
B) ನರಕ
C) ಸುಖ
D) ದುಃಖ

81. 2014 ರ ಕೇರಳ ಕಾರಾಗೃಹಗಳು ಮತ್ತು ಸಂಶುದ್ಧೀಕರಣ ಸನ್ಮಾರ್ಗೀಕರಣ ಸೇವೆಗಳು (ನಿರ್ವಹಣಾ) ನಿಯಮಗಳ ಪ್ರಕಾರ ವಿಶೇಷ ಉಪ-ಜೈಲುಗಳಲ್ಲಿ ಕೆಳಗೆ ಕೊಡಲಾಗಿರುವ ಯಾವ ವಿಭಾಗದವರನ್ನು ಇರಿಸಲಾಗುತ್ತದೆ ?
A) 3 ತಿಂಗಳುಗಳು B) 1 ತಿಂಗಳು C) 6 ತಿಂಗಳುಗಳು D) ಇವು ಯಾವುದೂ ಅಲ್ಲ

82. 2014 ರ ಕೇರಳ ಕಾರಾಗೃಹಗಳು ಮತ್ತು ಸಂಶುದ್ಧೀಕರಣ ಸನ್ಮಾರ್ಗೀಕರಣ ಸೇವೆಗಳು (ನಿರ್ವಹಣಾ) ನಿಯಮಗಳು 139 ರ ಪ್ರಕಾರ ಈ ಕೆಳಗಿನವುಗಳಲ್ಲಿ ಯಾವುದು ಪುರುಷ ಸಹಾಯಕ ಜೈಲು ಅಧಿಕಾರಿ ವರ್ಗದ ಅಡಿಯಲ್ಲಿ ಬರುವುದಿಲ್ಲ ?
A) ಜೈಲು ಅಧಿಕಾರಿ B) ದ್ವಾರಪಾಲಕ C) ಉಪ-ಜೈಲು ಅಧಿಕಾರಿ D) ಮೇಲಿನ ಎಲ್ಲರೂ

83. ಯಾವ ಕ್ರಿಮಿನಲ್ ಕಾರ್ಯವಿಧಾನದ ಶಾಸನವು ಶೈಕ್ಷಣಿಕ ಉದ್ದೇಶಗಳಿಗಾಗಿ ಜೈಲು ಶಿಕ್ಷೆಯನ್ನು ಅನುಭವಿಸುತ್ತಿರುವ ವ್ಯಕ್ತಿಯನ್ನು ಬಿಡುಗಡೆ ಮಾಡಲು ಸರಕಾರಕ್ಕೆ ಅಧಿಕಾರ ನೀಡುತ್ತದೆ ?
A) 432 (6) B) 334 (A) C) 294 (B) D) ಇವು ಯಾವುದೂ ಅಲ್ಲ

84. ಕೆಳಗಿನ ಯಾವ ವರ್ಗದ ಜನರಿಗೆ ಬೋರ್ಸ್ಟಾಲ್ ಶಾಲೆಯಲ್ಲಿ ಅವಕಾಶ ನೀಡಲಾಗುತ್ತದೆ ?
A) 18 ಕ್ಕಿಂತ ಕಡಿಮೆ ವಯಸ್ಸಿನವರಿಗೆ B) 16 ಕ್ಕಿಂತ ಕಡಿಮೆ ವಯಸ್ಸಿನವರಿಗೆ
C) 21 ಕ್ಕಿಂತ ಕಡಿಮೆ ವಯಸ್ಸಿನವರಿಗೆ D) 24 ಕ್ಕಿಂತ ಕಡಿಮೆ ವಯಸ್ಸಿನವರಿಗೆ

85. ಅಪರಾಧಿಗಳ ಅವಧಿಪೂರ್ವ ಬಿಡುಗಡೆಯ ಸಲಹಾ ಸಮಿತಿಯ ಅಧ್ಯಕ್ಷರು ಯಾರು ?
A) ಜಿಲ್ಲಾ ಸೆಷನ್ಸ್ ನ್ಯಾಯಾಧೀಶರು B) ಜೈಲು ಸೂಪರಿಂಟೆಂಡೆಂಟ್
C) ಜಿಲ್ಲಾಧಿಕಾರಿ D) ಜೈಲು ವಿಭಾಗದ ಮುಖ್ಯಸ್ಥರು

86. 1993 ರ ಮಾನವ ಹಕ್ಕು ಕಾಯಿದೆಯ ಅಡಿಯಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಯಾವಾಗ ಅಸ್ತಿತ್ವಕ್ಕೆ ಬಂದಿತು ?
A) 1993 ಅಕ್ಟೋಬರ್ 12 B) 1993 ಜನವರಿ 23
C) 1994 ಜನವರಿ 23 D) 1993 ಡಿಸೆಂಬರ್ 10

87. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರನ್ನು ನೇಮಕ ಮಾಡುವ ಅಧಿಕಾರವನ್ನು ಯಾರು ಹೊಂದಿದ್ದಾರೆ ?
A) ರಾಷ್ಟ್ರಪತಿಗಳು
B) ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು
C) ಪ್ರಧಾನಮಂತ್ರಿಗಳು
D) ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರು

88. ಕೆಳಗಿನವರಲ್ಲಿ ಯಾರು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಪದನಿಮಿತ್ತ ಸದಸ್ಯರಲ್ಲ ?
A) ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷರು
B) ಕೇಂದ್ರ ಕಾನೂನು ಸಚಿವರು
C) ರಾಷ್ಟ್ರೀಯ ಪರಿಶಿಷ್ಟ ವರ್ಗ ಆಯೋಗದ ಅಧ್ಯಕ್ಷರು
D) ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗದ ಅಧ್ಯಕ್ಷರು

89. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಸದಸ್ಯರನ್ನು ಶಿಫಾರಸ್ಸು ಮಾಡುವ ಸಮಿತಿಯ ಅಧ್ಯಕ್ಷರು
A) ಉಪರಾಷ್ಟ್ರಪತಿಗಳು B) ಲೋಕಸಭೆಯ ವಿರೋಧ ಪಕ್ಷದ ನಾಯಕರು
C) ಪ್ರಧಾನಮಂತ್ರಿಗಳು D) ಮೇಲಿನ ಯಾರೂ ಅಲ್ಲ

90. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ
A) ಪ್ರಧಾನ ಕಾರ್ಯದರ್ಶಿ
B) ಅಧ್ಯಕ್ಷರು
C) ಕಮೀಷನರ್
D) ಉಪಾಧ್ಯಕ್ಷರು

91. ಭಾರತದ ಮೊದಲ ಮಹಿಳಾ ಮುಖ್ಯ ಮಾಹಿತಿ ಆಯುಕ್ತರು ಯಾರು ?
A) ಸುಷ್ಮಾ ಸಿಂಗ್
B) ದೀಪಕ್ ಸಂಧು
C) ಪೂರ್ಣಿಮಾ ಅಡ್ವಾಣಿ
D) ಸುಷ್ಮಾ ಸ್ವರಾಜ್

92. RTI ಕಾಯಿದೆಯ ಅಡಿಯಲ್ಲಿ ಮಾಹಿತಿ ಪಡೆಯಲು ಬಡತನ ರೇಖೆಗಿಂತ ಮೇಲಿರುವವರು ಪಾವತಿಸಬೇಕಾದ ಶುಲ್ಕ
A) ರೂ. 100
B) ರೂ. 150
C) ರೂ. 50
D) ಮೇಲಿನ ಯಾವುದೂ ಅಲ್ಲ

93. ಕೆಳಗಿನ ಯಾವ ಕಾನೂನನ್ನು ಪ್ರಜಾಪ್ರಭುತ್ವದ ತೇಜಸ್ಸು ಎಂದು ಕರೆಯಲಾಗುತ್ತದೆ ?
A) ಮಾನವ ಹಕ್ಕುಗಳ ಕಾಯಿದೆ
B) ಮಕ್ಕಳ ಹಕ್ಕುಗಳ ಕಾಯಿದೆ
C) ಮಾಹಿತಿ ಹಕ್ಕು ಕಾಯಿದೆ
D) ಬಾಲಕಾರ್ಮಿಕ ನಿಷೇಧ ಕಾಯಿದೆ

94. ಮಾಹಿತಿ ಹಕ್ಕು ಕಾಯಿದೆಗೆ ಸಹಿ ಹಾಕಿದ ರಾಷ್ಟ್ರಪತಿ ಯಾರು ?
A) ಕೆ. ಆರ್. ನಾರಾಯಣನ್
B) ಪ್ರಣಬ್ ಕುಮಾರ್ ಮುಖರ್ಜಿ
C) ಎ. ಪಿ. ಜೆ. ಅಬ್ದುಲ್ ಕಲಾಂ
D) ಮೇಲಿನ ಯಾರೂ ಅಲ್ಲ

95. ಕೇಂದ್ರ ಮುಖ್ಯ ಮಾಹಿತಿ ಆಯುಕ್ತ ಹಾಗೂ ಆಯುಕ್ತರನ್ನು ಯಾರು ನೇಮಕ ಮಾಡುತ್ತಾರೆ ?
A) ರಾಷ್ಟ್ರಪತಿಗಳು
B) ಪ್ರಧಾನಮಂತ್ರಿಗಳು
C) ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು
D) ಮೇಲಿನ ಯಾರೂ ಅಲ್ಲ

96. ಮನೋವಿಶ್ಲೇಷಣೆಯ ಸಿದ್ಧಾಂತವನ್ನು ವಿವರಿಸಿದವರು ಯಾರು ?
A) ಗಾರ್ಡ್ನರ್
B) ಫ್ರಾಯ್ಡ್
C) ಆಲ್ಪೋರ್ಟ್
D) ಬಿನೆಟ್

97. ಕೆಳಗಿನವುಗಳಲ್ಲಿ ಯಾರು ಅಧಿಕ ಚಾಕ್ಷುಷ ದೈಶಿಕ ಬುದ್ಧಿಮತ್ತೆಯನ್ನು ಹೊಂದಿದ್ದಾರೆ ?
A) ಶಿಲ್ಪಿಗಳು
B) ಬರಹಗಾರರು
C) ಸಂಗೀತಜ್ಞರು
D) ರಾಜಕಾರಣಿಗಳು

98. ಭೂಕಂಪ, ಮಾಲಿನ್ಯ ಇತ್ಯಾದಿಗಳು ಯಾವ ಒತ್ತಡಕ್ಕೆ ಉದಾಹರಣೆಗಳಾಗಿವೆ ?
A) ಶಾರೀರಿಕ
B) ಮಾನಸಿಕ
C) ಪರಿಸರೀಯ
D) ಆಂತರಿಕ

99. ಗುರಿಯನ್ನು ಸಾಧಿಸುವ ಹಾದಿಯಲ್ಲಿ ಅಡೆತಡೆಗಳು ಎದುರಾದಾಗ _________ ಸಂಭವಿಸುತ್ತದೆ.
A) ಸಂಯೋಜನೆ
B) ಆತಂಕ
C) ಅಭಿಪ್ರೇರಣೆ
D) ನಿರಾಶೆ

100. ಬಾಹ್ಯ ಗೌರವಗಳಿಗಾಗಿ ಅಲ್ಲದೆ ವೈಯಕ್ತಿಕ ಹಿತಾಸಕ್ತಿಯಿಂದ ಮಾಡಲಾದ ಕಾರ್ಯಗಳು ಯಾವ ರೀತಿಯ ಅಭಿಪ್ರೇರಣೆಗೆ ಉದಾಹರಣೆಗಳಾಗಿವೆ ?
A) ಬಾಹ್ಯ ಅಭಿಪ್ರೇರಣೆ
B) ಆಂತರಿಕ ಅಭಿಪ್ರೇರಣೆ
C) ಅಧಿಕಾರ ಅಭಿಪ್ರೇರಣೆ
D) ಅಂಗೀಕಾರ ಅಭಿಪ್ರೇರಣೆ

**Space for Rough Work**